

ಎವರೆಸ್ಟ್ ಏರಿದ ಮೊದಲಿಗರಲ್ಲೊಬ್ಬರಾದ ನೇಪಾಳಿ–ಭಾರತೀಯ ತೇನ್‌ಸಿಂಗ್ ಕೂಡ ಯೇತಿಯ ಬಗ್ಗೆ ಮಾತನಾಡಿದ್ದಾರೆ. ಯೇತಿ ಇರುವ ಬಗ್ಗೆ ತಮಗೆ ಬಲವಾದ ಶಂಕೆಯಿದೆ ಎಂದಿರುವ ಅವರು, ಜನರು ಹೇಳುವ ಯೇತಿಯಂಥ ಪ್ರಾಣಿಯನ್ನು ತಾನೆಂದೂ ನೋಡಿಲ್ಲ ಎಂದಿದ್ದಾರೆ. ಆದರೆ, ಅವರ ತಂದೆ ಒಂದೆರಡು ಬಾರಿ ನೋಡಿರುವುದಾಗಿ ತಿಳಿಸಿರುವ ನೆನಪು ಅವರಿಗಿದೆ. ಮತ್ತೊಂದು ಕಡೆ, ಯೇತಿಯನ್ನು ಬಾಲವಿಲ್ಲದ ಒಂದು ದೊಡ್ಡ ಕಪಿ ಎಂದೂ ಬಣ್ಣಿಸಿದ್ದಾರೆ.

ಪರೀಕ್ಷಿಸಿದಾಗ ಮನುಷ್ಯರವಂತೆಯೇ ಕಾಣಿಸಿದವು. ಐದು ಬೆರಳುಗಳು ಸ್ಪಷ್ಟವಾಗಿದ್ದವು ಎಂದು ಕಾಂಚನಜುಂಗಾ ಪರಿಸರದಲ್ಲಿನ ತನ್ನ ಛಾಯಾಗ್ರಹಣದ ಅನುಭವಗಳ ಕುರಿತ ಕೃತಿಯಲ್ಲಿ ದಾಖಲಿಸಿದ್ದಾನೆ.

1986ರ ಜುಲೈನಲ್ಲಿ ರಿನ್‌ಹೋಲ್ಡ್ ಮೆಸ್‌ನರ್ (**Reinhold Messner**) ಎನ್ನುವ ಪರ್ವತಾರೋಹಿ ತೆಗೆದ ಬೃಹತ್ ಹೆಜ್ಜೆಗುರುತಿನ ಚಿತ್ರವೂ ಸುದ್ದಿ ಮಾಡಿತು. ಟಿಬೆಟ್‌ನಲ್ಲಿ ತೆಗೆದಿದ್ದ ಈ ಫೋಟೊದಲ್ಲಿ ಬೆರಳುಗಳು ಕಾಣಿಸುತ್ತಿದ್ದವು. ‘ಈ ಗುರುತು ತಾಜಾ ಆಗಿದ್ದಾಗಲೇ ನಾನ್ನ ಕಣ್ಣಿಗೆ ಬಿತ್ತು. ಈ ಗುರುತಿನ ಪಕ್ಕದಲ್ಲಿನ ಮಣ್ಣನ್ನು ಸ್ಪರ್ಶಿಸುವ ಮೂಲಕ ಕೆಲವು ಕ್ಷಣಗಳ ಮೊದಲಷ್ಟೇ ಹೆಜ್ಜೆ ಮೂಡಿದ್ದನ್ನು ಸ್ಪಷ್ಟಪಡಿಸಿಕೊಂಡೆ’ ಎಂದು ಮೆಸ್‌ನರ್ ಹೇಳಿದ್ದಾರೆ. ‘ಮೈ ಕ್ವೆಸ್ಟ್ ಫಾದರ್ ಯೇತಿ’ ಎಂಬ ತಮ್ಮ ಪುಸ್ತಕದಲ್ಲಿ ಮೆಸ್‌ನರ್, ‘ಹಿಮಾಲಯದ ಒಂದು ಕೆಂಪುಬಣ್ಣದ ಕರಡಿ. ಇದು ನೇರವಾಗಿ ಅಥವಾ ನಾಲ್ಕು ಕಾಲುಗಳ ಮೇಲೆ ನಡೆಯುತ್ತದೆ’ ಎಂದಿದ್ದಾರೆ. ಅಳಿವನಂಚಿನಲ್ಲಿರುವ ಜೀವಿ ಎಂದೂ ಯೇತಿಯನ್ನವರು ಬಣ್ಣಿಸಿದ್ದಾರೆ.

## ಏನಿದು ಯೇತಿ?

ಐದರಿಂದ ಎಂಟು ಅಡಿ ಎತ್ತರದ, ಮೈಯೆಲ್ಲ ಕೂದಲುಳ್ಳ ಹಿಮಮಾನವನಿಗೆ ಯೇತಿ ಎಂದು ಹೆಸರು. ಈವರೆಗೆ ಈ ಹಿಮಮಾನವನ ಅಸ್ತಿತ್ವದಲ್ಲಿರುವುದು ಹೆಜ್ಜೆಗುರುತುಗಳ ಛಾಯಾಚಿತ್ರಗಳಲ್ಲಿ ಹಾಗೂ ಕಲ್ಪನೆಯಲ್ಲಿ ಮಾತ್ರ.

ಹಿಮಾಲಯ ಪರಿಸರದ ಜನರ ಬಾಯಲ್ಲಿ ಯೇತಿಗೆ ಅನೇಕ ಹೆಸರುಗಳು. ಟಿಬೆಟನ್ ಭಾಷೆಯಲ್ಲಿ ಅದಕ್ಕೆ ‘ಮಿಷೆ’ ಎನ್ನುವ ಹೆಸರಿದೆ. ಹಾಗೆಂದರೆ ಮನುಷ್ಯ ಕರಡಿ ಎಂದರ್ಥ. ಜಾನುವಾರು ರೂಪದ ಕರಡಿ (**Cattle Bear**), ಕಂದು ಕರಡಿ, ಕಾಡುಮನುಷ್ಯ ಎಂದೂ ಯೇತಿಯನ್ನು ಕರೆಯಲಾಗುತ್ತದೆ. 1966ರಲ್ಲಿ ಭೂತಾನ್ ಸರ್ಕಾರ ಯೇತಿಗಳ ಹೆಸರಿನಲ್ಲಿ ಅಂಚೆಚೀಟಿ ಹೊರತಂದಿರುವುದು ಅದರ ಪ್ರಸಿದ್ಧಿಗೆ ಉದಾಹರಣೆಯಂತಿದೆ.

ಮೇತಿ (ಕರಡಿ) ಎನ್ನುವ ಆಡುಭಾಷೆಯ ಶಬ್ದವೇ ನಾಲಗೆಗಳಲ್ಲಿ ಯೇತಿಯಾಗಿದೆ ಎನ್ನುವ ತರ್ಕವಿದೆ. ಯೇತಿ ಎನ್ನುವ ಶಬ್ದಕ್ಕೆ ಕಲ್ಲು, ಬಂಡೆಯ